ಅಳಿಸಿಕೊಂಡು ಮಾಮೂಲಿನ ಸುಬ್ಬಿಯಾಗಿ ಹೊರಬರುತ್ತಿದ್ದಳು. ಒಳ ಬಯಕೆಯ ಮೂರ್ತರೂಪವಾಗಿ ಸುಬ್ಬಿ ಅನ್ನುವ ಹಳಸಲು ಹೆಸರನ್ನು ಆಕರ್ಷಕ ಹೆಸರಿಗೆ ಬದಲಿಸಲು ಪ್ರೇರೇಪಿಸಿತ್ತು ಮನಸ್ಸು. ಯಾರಿಗೂ ಗೊತ್ತಾಗುವುದಿಲ್ಲ ಅಂದುಕೊಂಡಿದ್ದು ತಡವಿಲ್ಲದೆ ಬಹಿರಂಗವಾಗಿತ್ತು.

ಅನುಕೂಲಸ್ಥ ಮನೆತನ, ಸುಬ್ಬಿಯ ಸೌಂದರ್ಯ ನೆಂಟರಿಷ್ಟರೊಳಗೆ ಬಹಳ ಜನಕ್ಕೆ ಸಂಬಂಧ ಮಾಡುವ ಹಪಾಹಪಿ ಹುಟ್ಟಿಸಿತ್ತು. ಅವಳ ಎತ್ತರ ಕೆಲವು ಗಂಡುಗಳಿಗೆ ಪ್ರತಿಕೂಲವಾಗಿ ರಕ್ಷಿಸಿದ್ದರೂ ಆದರೆ ಆಗಲಿ ಅನ್ನುವ ಆಸೆಯಿತ್ತು. ಸುಮ್ಮನೆ ಮದುವೆ ಅಂತ ಮನೆಯಲ್ಲಿ ಒಂದುಮಾತು ಆಡಿದ್ದು ಅದು ಹೇಗೆ ವರ್ತಮಾನ ಸಿಕ್ಕಿತೋ ಸಂಬಂಧಿಕರು, ಸಮಾಜದವರಿಂದ ಒಂದರ ಮೇಲೊಂದು ಪ್ರಸ್ತಾಪ ಬರಲುತೊಡಗಿತು. ಎರಡು ಮೂರು ಗಂಡುಗಳು ಏನೋ ನೆಪಮಾಡಿಕೊಂಡು ಬಂದು ಕುಶಲ ವಿಚಾರಿಸಿ ಹೋದರು. ಥು! ಒಬ್ಬರಿಗಿಂತ ಒಬ್ಬರು ಅಧ್ವಾನವಾಗಿದ್ದಾರೆ. ಯಾರೋ ತಲೆಮಾಸಿದವನೊಬ್ಬನ್ನ ಕಟ್ಟಿಕೊಂಡರೆ ಮುಗಿಯಿತು. ತನ್ನನ್ನ ಹಿಂಡಿ ಒಂದು ಮಗು ಹಡಿಸಿ ಗಬ್ಬೆಬ್ಬಿಸಿ ಬಿಡತಾನೆ! ರೋಷದಿಂದ ಅವಡುಗಚ್ಚಿದಳು. ‘ಅಪ್ಪ... ನಂಗಿನ್ನೂ ಹದಿನೆಂಟು ವರ್ಷ, ವಜ್ಜೆಯಾಗಿಬಿಟ್ನ? ಕಲಿಯೋದು ಮುಗಿಯೋವರೆಗು ಮಾತೆತ್ತಬೇಡಿ...’ ಅಂದಳು ಹನಿಗಣ್ಣಾಗಿ. ‘ಯಾರೆ ಸುಬ್ಬಿ, ನಿಂಗೆ ನಾಳೆನೇ ಮದುವೆ ಮಾಡತಾರೆ? ಈ ವರ್ಷ ಪಿಯುಸಿ ಮುಗಿಸು. ಮಾತುಕತೆ ಅಂತ ನಮಗೂ ಅಷ್ಟು ಹಿಡಿದೇಹಿಡಿತದೆ, ಇದೆಲ್ಲಾ ಒಂದು ಹಂತಕ್ಕೆ ಬರೋಕೆ’ ಅಂದ ಚಂದ್ರಯ್ಯ. ತೀವ್ರ ಆತಂಕಕ್ಕೊಳಗಾದ ಸುಬ್ಬಿಗೆ ಹಗಲು ರಾತ್ರಿಯೆಲ್ಲ ಯೋಚನೆಯಾಯ್ತು. ಒಂದು ವಾರದಲ್ಲಿ ನಿರ್ಧಾರಕ್ಕೆ ಬಂದಳು. ‘ಅಪ್ಪಾ, ಮಾತಂಗೀದೂ ಈ ಸಾರಿ ಪಿಯುಸಿ. ಒಂದು ತಿಂಗಳು ಅಲ್ಲಿದ್ದು ಟ್ಯೂಷನ್ ತಗೊಂಡು ಬರತೇನೆ’ ಅಂದದ್ದಕ್ಕೆ ಹುಬ್ಬಳ್ಳಿಯವರು ಹೇಗೂ ಹತ್ತಿರದ ಸಂಬಂಧಿಕರು; ಒಳ್ಳೇದೆ ಅನಿಸಿತು ಚಂದ್ರಯ್ಯನಿಗೆ. ಎರಡುದಿನ ಬಿಟ್ಟು ಬಸ್ಸು ಹತ್ತಿದಳು ಸುಬ್ಬಿ. ಹುಬ್ಬಳ್ಳಿ ಬಸ್‌ನಿಲ್ದಾಣದಲ್ಲಿ ಕುಳಿತು ಸುರಕ್ಷಿತವಾಗಿ ಬಂದು ತಲಪಿದ್ದೇನೆ, ದಿನಾ ಫೋನುಮಾಡಲ್ಲ, ಓದೋದಿರ್ತದೆ ಗಾಬರಿಯಾಗಬೇಡಿ ಅಂತ ಹೇಳಿ ಕಟ್ಟುಮಾಡಿದಳು. ಅಲ್ಲಿಂದ ಆಟೊ ಹಿಡಿದು ರೈಲು ನಿಲ್ದಾಣಕ್ಕೆ ಬಂದಳು. ಬೆಂಗಳೂರಿನ ಜನಶತಾಬ್ದಿ ಅರ್ಧತಾಸಿನಲ್ಲಿ ಹೊರಡುವುದಿತ್ತು, ಟಿಕೆಟ್ಟು ಪಡೆದು ಕುಳಿತುಬಿಟ್ಟಳು. ಯಶವಂತಪುರದಲ್ಲಿ ಅರ್ಧತಾಸು ಕಾದು ಸಂಗೊಳ್ಳಿ ರಾಯಣ್ಣ ನಿಲ್ದಾಣ ತಲುಪುವಾಗ ಹತ್ತುಗಂಟೆ ರಾತ್ರಿ. ಗದ್ದಲದಲ್ಲಿ ಹೊರಬರುತ್ತಿರುವಂತೆ ರಿಕ್ಷಾದವರು ‘ಎಲ್ಲಿಗೆ ಮೇಡಮ್?’ ಕೇಳುತ್ತ ಬೆನ್ನುಹತ್ತಿದರು. ಅಪರಿಚಿತ ನಗರದಲ್ಲಿ ತನಗೆ ಹೋಗಲು ಯಾವ ವಿಳಾಸವಿಲ್ಲ ಎಂಬ ಸಣ್ಣ

**ಗಾಂಧಿನಗರವೊಂದು ಉದ್ಯಾನವನ ಮಧ್ಯದ, ಹೂಬಳ್ಳಿಗಳು ತುಂಬಿದ ವೈಭವೋಪೇತ ಉಪನಗರದಂತೆಯೂ, ಯಾವಹೊತ್ತಿಗು ಅಲ್ಲಿ ಚಿತ್ರರಂಗದ ಘಟಾನುಘಟಿ ತಾರೆಯರು ಮಾರುಮಾರಿಗೆ ಓಡಾಡಿಕೊಂಡೋ ಅಥವಾ ಚಿತ್ರೀಕರಣದಲ್ಲಿ ನಟಿಸುತ್ತಲೋ ಸಿಗುತ್ತಾರೆ ಅನ್ನುವ ಚಿತ್ರ ಚಿತ್ತಭಿತ್ತಿಯಲ್ಲಿ ಕೊರೆದುಹೋಗಿತ್ತು.**